<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಕಲಘಟಗಿ</u>

ಸಿಸಿ ನಂಃ 323-18

**ಚಾಸಾಃ 11**

**ಪ್ರಾಸಾಃ 5**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 21.09.2019 ರಂದು ಪ್ರಮಾಣ ಮಾಡಿಸಲಾಯಿತು.

ಸಾಕ್ಷಿಯ ಹೆಸರು : ನೀಲವ್ವ ತಿಪ್ಪಣ್ಣವರ್
ತಂದೆಃ ಗಂಡ ಹೆಸರು : ತೋಪಣ್ಣ
ಉದ್ಯೋಗ : ಗೌಂಡಿ
ವಯಸ್ಸು : 36
ವಾಸಸ್ಥಳ : ಮಳಲಿ, ಕುಂದಗೋಳ ತಾಲ್ಲೂಕು.
ಪ್ರಾರಂಭ ಸಮಯ : ೦೪.೨೫ ಪಿ ಎಂ
ಮುಖ್ಯ ವಿಚಾರಣೆ ಎಪಿಪಿ ಅವರಿಂದಃ

ಮೃತ ತೋಪಣ್ಣ ನನ್ನ ಗಂಡನಾಗಿದ್ದನು, ದಿಃ 25.005.2017 ರಂದು ನಮ್ಮ ಬೈಕ್ ಮೇಲೆ ನಾನು ಮತ್ತು ನನ್ನ ಗಂಡ ಸೇರಿಕೊಂಡು ಅಮವಾಸ್ಯೆ ಇರುವುದರಿಂದ ತಬಕದಹೊನ್ನಳ್ಳಿಯ ಹೊಳೆಮ್ಮನ ದೇವಸ್ಥಾನಕ್ಕೆ ಹೋಗಿದ್ದೇವು. ನಂತರ ದೇವರ ದರ್ಶನ ಮುಗಿಸಿಕೊಂಡು ತಬಕದಹೊನ್ನಳ್ಳಿಯಿಂದ ಮಳಲಿಗೆ ಹೊರಟಾಗ ಮಧ್ಯಾಹ್ನ 3.30 ಗಂಟೆಗೆ ತಡಸ ರಸ್ತೆಯ ಕ್ರಿಸ್ಟಯನ್ ಆಸ್ಪತ್ರೆಯ ಹತ್ತಿರ ನಮ್ಮ ಹಿಂದುಗಡೆಯಿಂದ ಒಂದು ಕ್ರೂಸರ್ ವಾಹನ ಅತೀವೇಗ ಮತ್ತು ನಿರ್ಲಕ್ಷತನದಿಂದ ಓಡಿಸಿಕೊಂಡು ಬಂದು ನಮ್ಮ ಬೈಕ್ ಹಿಂದಿನಿಂದ ಅಪಘಾತಪಡಿಸಿರುತ್ತಾರೆ. ನನಗೆ ಬಿದ್ದ ಹೊಡೆತದಿಂದ ನನ್ನ ಕಣ್ಣಿಗೆ, ನನ್ನ ಶರೀರದ ಬಲಭಾಗಕ್ಕೆ ಮತ್ತು ಕಾಲಿಗೆ ತೀವ್ರ ಸ್ವರೂಪದ ಗಾಯಗಳು ಉಂಟಾಗಿರುತ್ತವೆ. ನನ್ನ ಗಂಡನಿಗೆ ತಲೆಗೆ ಮತ್ತು ಶರೀದ ಅನೇಕ ಭಾಗಗಳಿಗೆ ತೀವ್ರ ಸ್ವರೂಪದ ಗಾಯಗಳುಂಟಾಗಿರುತ್ತವೆ. ಸಾರ್ವಜನಿಕರು ಬಂದು ನಮಗೆ ಪ್ರಥಮ ಚಿಕಿತ್ಸೆಯನ್ನು ನೀಡಿ ನಂತರ ಅಂಬ್ಯುಲೆನ್ಸ್ ವಾಹನದ ಮೇಲೆ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಕ್ರೂಸರ್ ವಾಹನದ ಚಾಲಕನು ಅಪಘಾತಪಡಿಸಿದ ವಾಹನವನ್ನು ಅಲ್ಲೇ ಬಿಟ್ಟು ಓಡಿ ಹೋಗಿದ್ದನು. ಅಪಘಾತವು ಕ್ರೂಸರ್ ಚಾಲಕನ ತಪ್ಪಿನಿಂದಲೇ ಆಗಿರುತ್ತದೆ. ನನ್ನ ಗಂಡನ ಮರಣಕ್ಕೆ ಕ್ರೂಸರ್ ವಾಹನದ ಚಾಲಕನ ನಿರ್ಲಕ್ಷತದ ಚಾಲನೆಯಿಂದ ಆಗಿರುತ್ತದೆ.

ಆರೋಪಿತನು ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿ ಎದುರುಗಡೆಯಿಂದ ಬರುತ್ತಿದ್ದ ಮೋಟಾರ್ ಸೈಕಲ್‌ಗೂ ಕೂಡ ಡಿಕ್ಕಿ ಮಾಡಿ ಅದರಲ್ಲಿ ಬರುತ್ತಿದ್ದ ಇಬ್ಬರಲ್ಲಿ ಒಬ್ಬರು ಮೃತರಾಗಿದ್ದು, ಇನ್ನೊಬ್ಬರಿಗೆ ತೀವ್ರ ಸ್ವರೂಪದ ಮತ್ತು ಸಾದಾ ಸ್ವರೂಪದ ಗಾಯಗಳು ಉಂಟಾಗಿರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ.

ನಂತರ ಆರೋಪಿತನ ಮೇಲೆ ದೂರನ್ನು ನೀಡಿರುವ ವಿಚಾರ ನನಗೆ ತಿಳಿದು ಬಂದಿರುತ್ತದೆ.

ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಅರ್ ಜಿ ವಕೀಲರಂದಃ

ಕ್ರೂಸರ್ ವಾಹನವನ್ನು ಯಾರು ಓಡಿಸುತ್ತಿದ್ದರು ಅಂತ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ನಾವು ಚಾಲಾಯಿಸುತ್ತಿದ್ದ ಬೈಕ್‌ನ್ನು ವೇಗವಾಗಿ ಮತ್ತು ತಡಸ ಕಡೆಯಿಂದ ಬರುತ್ತಿದ್ದ ಬೈಕ್ ವೇಗವಾಗಿ ಬಂದು ನಡುವೆ ಅಪಘಾತ ಸಂಭವಿಸಿದ್ದು, ಕ್ರೂಸರ್ ವಾಹನ ನಮಗೆ ಅಪಘಾತಪಡಿಸಿಲ್ಲ ಅಂದರೆ ಸರಿಯಲ್ಲ. ಟ್ಯಾಕ್ಸ್ ವಾಹನವು ನಮಗೆ ಅಪಘಾತಪಡಿಸಿ ನಂತರ ಮುಂದೆ ಬರುವ ಬೈಕಿಗೂ ಅಪಘಾತಪಡಿಸಿರುತ್ತದೆ. ನಮ್ಮ ಎದುರುಗಡೆ ಬರುತ್ತಿರುವ ಬೈಕ್ ಯಾವ ವೇಗದಲ್ಲಿ ಬರುತ್ತಿತ್ತು ಅಂದರೆ ನನಗೆ ಗೊತ್ತಿಲ್ಲ. ಕ್ರೂಸರ್ ವಾಹನ ಹಿಂದುಗಡೆಯಿಂದ ಅಪಘಾತಪಡಿಸಿದ್ದರಿಂದ ಅದರ ಚಾಲಕ ಯಾರು ಇದ್ದರು ಅಂತ ನನಗೆ ಗೊತ್ತಿಲ್ಲ ಅಂದರೆ ಸರಿ. ನಮ್ಮ ಹೇಳಿಕೆಗಳಿಗೆ ಸಹಿಯನ್ನು ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ. ಅದನ್ನು ಹೊರತಾಗಿ ಬೇರೆ ಎಲ್ಲೂ ಹೇಳಿಕೆಯನ್ನು ನೀಡಿಲ್ಲ. ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಅಂತ ನನಗೆ ಗೊತ್ತಿಲ್ಲ ಅಂದರೆ ಸರಿ. ನಾನು ವಿಮೆ ಪರಿಹಾರವನ್ನು ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಕಲಘಟಗಿ</u>

ಸಿಸಿ ನಂಃ 323-18

**ಚಾಸಾಃ 22**

**ಪ್ರಾಸಾಃ 4**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 21.09.2019 ರಂದು ಪ್ರಮಾಣ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಃ | ಪರಮೇಶ್ವರ ಕವಟಗಿ |
| ತಂದೆಃ ಗಂಡ ಹೆಸರು | ಃ | ಗುರುಸಿದ್ದಪ್ಪ |
| ಉದ್ಯೋಗ | ಃ | ಪಿ ಎಸ್ ಐ ಗರಗ, ಪೋಲೀಸ್ ಠಾಣೆ |
| ವಯಸ್ಸು | ಃ | 34 |
| ವಾಸಸ್ಥಳ | ಃ | ಗರಗ. |

ಪ್ರಾರಂಭ ಸಮಯ ಃ 01.35 ಪಿ ಎಂ.
ಮುಖ್ಯ ವಿಚಾರಣೆ ಃ ಎಪಿಪಿ ರವರಿಂದ

ದಿಃ 14.08.2016 ರಿಂದ ದಿಃ 27.09.2017 ರವರೆಗೆ ನಾನು ಪಿ ಎಸ್ ಐ ಅಂತ ಕಲಘಟಗಿ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 26.05.2017 ರಂದು ನಾನು ಠಾಣಾ ಪ್ರಭಾರದಲ್ಲಿ ಇರುವಾಗ ಚಾಸಾ ೧ ರವರು ನನ್ನ ಮುಂದೆ ಹಾಜರಾಗಿ ಲಿಖಿತ ಪಿರ್ಯಾದಿಯನ್ನು ನೀಡಿದ್ದು, ಸದರಿ ಪಿರ್ಯಾದಿಯನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ.೧೯೪/೨೦೧೭ ಅಂತ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ಮೃತ ಶ್ರೀಕಾಂತ ಹೈಗಾರ್ ಇವರ ಶವ ತನಿಖಾ ವರದಿಯನ್ನು ಚಾಸಾ ೬ ಮತ್ತು ೭ ರವರ ಸಮಕ್ಷಮ ಮಧ್ಯಾಹ್ನ ೧.೧೫ ರಿಂದ ೨.೪೫ ರವರಗೆ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಯಲ್ಲಿ ಮಾಡಿರುತ್ತೇನೆ. ಇನ್ನೊಬ್ಬ ಮೃತ ವ್ಯಕ್ತಿಯ ಶವ ತನಿಖಾ ವರದಿಯನ್ನು ಮಾಡುವಂತೆ ಚಾಸಾ ೨೧ ರವರಿಗೆ ಆದೇಶಿಸಿರುತ್ತೇನೆ. ಚಾಸಾ ೨೧ ರವರು ಮೃತ ತೋಪಣ್ಣ ತಿಪ್ಪಣ್ಣವರ್ ರವರ ಶವ ತನಿಖಾ ವರದಿಯನ್ನು ಚಾಸಾ ೪ ಮತ್ತು ೫ ರವರ ಸಮಕ್ಷಮ ಮಧ್ಯಾಹ್ನ ೧.೧೫ ರಿಂದ ೨.೪೫ ರವರೆಗೆ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಯಲ್ಲಿ ಮಾಡಿರುತ್ತಾರೆ. ಮೃತರ ಕುಟುಂಬದವರಿಗೆ ಶವವನ್ನು ನೀಡಿ ಪಾವತಿಯನ್ನು ನೀಡಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ ೨೩ ರವರಿಗೆ ಕಡತವನ್ನು ವಹಿಸಿಕೊಟ್ಟಿರುತ್ತೇನೆ.

ನಾನು ಸ್ವೀಕರಿಸಿದ ದೂರನ್ನು ಈಗ ನೋಡಿದ್ದು, ಅದನ್ನು ಈಗಾಗಲೇ ನಿಪಿ ೧ ಅಂತ ಗುರುತಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ ೧ಬಿ ಅಂತ ಗುರುತಿಸಲಾಯಿತು.

ಮೃತ ಶ್ರೀಕಾಂತರವರ ಶವ ತನಿಖಾ ವರದಿಯನ್ನು ಈಗ ನೋಡಿದ್ದು, ಅದನ್ನು ನಿಪಿ ೯ ಅಂತ, ಸಾಕ್ಷಿ ಸಹಿಯನ್ನು ನಿಪಿ ೯ ಎ ಅಂತ ಗುರುತಿಸಲಾಯಿತು.

ಪ್ರಥಮ ವರ್ತಮಾನ ವರದಿಯನ್ನು ನಿಪಿ ೧೦ ಅಂತ, ಸಾಕ್ಷಿ ಸಹಿ ನಿಪಿ ೧೦ಎ ಅಂತ ಗುರುತಿಸಲಾಯಿತು.

ಮೃತ ತೋಪಣ್ಣರವರ ಶವ ತನಿಖಾ ವರದಿಯನ್ನು ಈಗ ನೋಡಿದ್ದು, ಅದನ್ನು ನಿಪಿ ೧೧ ಅಂತ ಗುರುತಿಸಲಾಯಿತು.

ನಿಪಿ ೧೧ ಮತ್ತು ನಿಪಿ ೯ಕ್ಕೆ ಅರೋಪಿತರ ಪರ ವಕೀಲರ ಸಮ್ಮತಿಯ ಮೇಲೆ ಗುರುತಿಸಲು ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲು : ಆರೋಪಿತರ ಪರ ಶ್ರೀ ಎ ಟಿ ಓ ಪರವಾಗಿ ಶ್ರೀ ವಿ ಅರ್ ಜಿ ವಕೀಲರಿಂದ

ಪಿರ್ಯಾದುದಾರರು ಠಾಣೆಗೆ ಬೆಳಿಗ್ಗೆ ೧೧.೧೫ ಗಂಟೆ ಸುಮಾರಿಗೆ ಕೊಟ್ಟಿರುತ್ತಾರೆ. ಘಟನೆಯು ದಿಃ ೨೫.೦೫.೨೦೧೮ ರಂದು ಜರುಗಿರುತ್ತದೆ. ದೂರನ್ನು ಒಂದು ದಿನ ವಿಳಂಬವಾಗಿ ಸಲ್ಲಿಸಿರುತ್ತಾರೆ. ಯಾವ ಕಾರಣದಿಂದ ದೂರನ್ನು ವಿಳಂಬವಾಗಿ ನೀಡುತ್ತಿದ್ದಾರೆ ಅಂತ ಚಾಸಾ ೧ ರವರು ದೂರಿನಲ್ಲಿ ಹೇಳಿರುತ್ತಾರೆ. ಚಾಸಾ ೧ ರವರು ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.